ಕಥೆ

# ಪಾಲು



**ಹಾಡ್ಲಹಳ್ಳಿ ನಾಗರಾಜ್**

ಕಲೆ: ರಾಮಕೃಷ್ಣ ಸಿದ್ರಪಾಲ

ಹೋ^ssss...!' ಆಚೆಯ ದೇವರ ಬನದ ದೀಣೆಯ ಕಡೆಯಿಂದ ಕೋಲಾಹಲ ಕೇಳಿ ಕುತೂಹಲಗೊಂಡ ಮಾಧ್ಯಮಿಕ ಶಾಲೆಯ ಮಕ್ಕಳು ಪಾಠ ಕೇಳುವುದನ್ನು ಬಿಟ್ಟು ಕಿಟಕಿಯ ಕಡೆ ಧಾವಿಸಿ ಆ ಕಡೆ ನೋಡತೊಡಗಿದರು. ಶನಿವಾರದ ಮಾರ್ನಿಂಗ್ ಕ್ಲಾಸ್ ಮುಗಿಸಲು ಇನ್ನೂ ಹತ್ತು ನಿಮಿಷವಿದ್ದರೂ ಮಂಜುಳಾ ಟೀಚರ್ ಪಾಠ ನಿಲ್ಲಿಸಿ ವ್ಯಾನಿಟಿ ಬ್ಯಾಗ್ ಎದೆಗವಚಿಕೊಂಡು ತರಗತಿ ಕೊಠಡಿಯಿಂದ ಹೊರಬಂದು ದೇವರ ಬನದ ಕಡೆಗೆ ನಡೆಯುತ್ತಾ ಕುತೂಹಲದ ದೃಷ್ಟಿ ಬೀರತೊಡಗಿದಳು. ಶಾಲೆಯ ಇತರ ಸಿಬ್ಬಂದಿ ಹಾಗೂ ಮಕ್ಕಳೂ ಅವಳನ್ನು ಅನುಸರಿಸಿದರು.

ಗದ್ದೆಯ ಆಚೆ ದೀಣೆಯ ಇಳಿಜಾರಿನಲ್ಲಿ ಜನ ಮೆರವಣಿಗೆಯೋಪಾದಿಯಲ್ಲಿ ಧಾವಿಸಿ ಬರುತ್ತಿದ್ದಾರೆ. ಮಧ್ಯದಲ್ಲಿ ಕೆಲವರು ದೇವರ ಅಡ್ಡೆಯಂತಹದ್ದನ್ನು ಹೊತ್ತು ನಡೆದಿದ್ದಾರೆ.

ದೇವರಬನದ ನೆತ್ತಿಭಾಗದಲ್ಲಿದ್ದಾಗ ಕೇವಲ ಬೆರಳೆಣಿಕೆಯಷ್ಟಿದ್ದ ಜನರ ಗುಂಪು ಮುಂದಕ್ಕೆ ಬರುಬರುತ್ತಾ ಪ್ರೌಢಶಾಲೆಯ ಕಡೆಯಿಂದ, ಆಸ್ಪತ್ರೆಯ ಕಡೆಯಿಂದ, ನಾಡಕಚೇರಿಯ ಕಡೆಯಿಂದ, ಹಾಸ್ಟೆಲ್ ಕಡೆಯಿಂದ, ಹೀಗೆ ನಾನಾ ಕಡೆಯಿಂದ ಜನರು ಕುತೂಹಲದಿಂದ ಓಡಿಬಂದು ಸೇರಿಕೊಂಡು ಅದೊಂದು ದೊಡ್ಡ ಮೆರವಣಿಗೆಯೇ ಆಗಿಹೋಯಿತು. ಆದರೆ ಹೊತ್ತಿದ್ದ ಅಡ್ಡೆಗೆ ಯಾವುದೇ ಹೂವಿನ ಅಲಂಕಾರವಿಲ್ಲ, ವಾದ್ಯಘೋಷವಿಲ್ಲ... ಬರೀ ನೂಕುನುಗ್ಗಲು, ಗದ್ದಲ, ಕೋಲಾಹಲ ಅಷ್ಟೇ !....

ಮೆರವಣಿಗೆ ಊರ ದಿಕ್ಕಿನಲ್ಲಿ, ತಗ್ಗಿನ ಕಡೆಗೆ ಮುಂದುವರಿದಂತೆ, ಅದು ಮಾಮೂಲಿನ ದೇವಸ್ಥಾನದ 'ಕುರ್ಜಿಗೆ' ಅಲ್ಲ, ಮರದ ಕುರ್ಚಿಯ ಎರಡೂ ಬದಿಗೆ ಬಡಿಗೆ ಕಟ್ಟಿ ಹೆಗಲ ಮೇಲೆ ಹೊತ್ತಿರುವುದು, ಅದರೊಳಗೆ ದೇವರ ವಿಗ್ರಹದ ಬದಲು ಜೀವಂತ ಹೆಂಗಸೊಂದರ ದೇಹವನ್ನು ಹಗ್ಗದಿಂದ ಬಿಗಿದು ಕುಳ್ಳಿಸಿರುವುದೂ ಅಸ್ಪಷ್ಟವಾಗಿ ಕಂಡು ನೋಡುಗರು ಇನ್ನೂ ಕೌತುಕಕ್ಕೆ ಬಿದ್ದರು.

ಇತ್ತೀಚೆಗೆ ಟಿಸಿಎಚ್ ಮುಗಿಸಿ ಟೀಚರ್ ಆಗಿ ಸೇರಿಕೊಂಡಿದ್ದ ಅದೇ ಊರಿನ ಬಾವಿಮನೆ ಮಂಜುಳಾಳಿಗೆ ಎದುರಿನ ಘಟನಾವಳಿಗಳ ತಲೆಬುಡ ಅರ್ಥವಾಗದಾಯಿತು. 'ಅರೆ ಇದೇನಿದು. ಕಳೆದ ವಾರ ತಾನೇ ಸುಗ್ಗಿಯ ಹಬ್ಬ ಮುಗಿದಿದೆ. ಮತ್ತೆ ಈಗ್ಯಾವ ದೇವರ ಮೆರವಣಿಗೆ' ಎಂದಳು. ಅವಳೊಂದಿಗೆ ಬಂದಿದ್ದ ಮಿಕ್ಕವರಿಗೂ ಅರ್ಥವಾಗದೇ ಬರಿದೇ ಮುಖ ಮುಖ ನೋಡಿಕೊಂಡರು. ಅಲ್ಲಿಯೇ ಗುಂಪಿನ ನಡುವೆ ಬೀಡಿ ಸೇದುತ್ತಾ ನಿಂತಿದ್ದ, ಮುಂದಿನ ವಾರವಷ್ಟೇ ಸೇವೆಯಿಂದ ನಿವೃತ್ತನಾಗಲಿದ್ದ ಶಾಲೆಯ ಜವಾನ ಹಾದಿಮನೆ ಗುಂಡೇಗೌಡ 'ದೇವರೂ ಅಲ್ಲ ಎಂತದೂ ಅಲ್ಲ. ಆ ಕುರ್ಚಿಯ ಮ್ಯಾಲೆ ಕಟ್ಟಿ ಕೂರಿಸಿರದು